## ಮೂಳೆ ಎಂಜಿನಿಯರ್

ನಾನು ನನ್ನ ಸಂಬಂಧಿಕರ ಮದುವೆಗೆ ಹೋಗಿದ್ದೆ. ಬಹಳ ದಿನಗಳ ನಂತರ ಅಲ್ಲಿ ನನ್ನ ಸಂಬಂಧಿಕರೊಬ್ಬರು ಎದುರಾದರು. ಅವರಿಗೆ ನನ್ನ ಒಬ್ಬ ಸ್ನೇಹಿತನನ್ನು ಪರಿಚಯಿಸಬೇಕಾಯಿತು. 'ಇವರು ಮೂಳೆ ಎಂಜಿನಿಯರ್' ಎಂದು ಅವನನ್ನು ಪರಿಚಯಿಸಿದೆ. ಅವರು, 'ಮೂಳೆ ವೈದ್ಯರು ಗೊತ್ತು, ಮೂಳೆಗೆ ಎಂಜಿನಿಯರ್ ಸಹ ಇರ್ತಾರಂತೆ ಗೊತ್ತೇ ಇರಲಿಲ್ಲ' ಎಂದರು. 'ಇವರು ಎಂಜಿನಿಯರ್, ಮನೆತನದ ಹೆಸರು ಮೂಳೆ' ಎಂದು ವಿವರಿಸಿದಾಗ ಅವರೂ ನಕ್ಕರು.

**ಸಿ. ವೇಣುಗೋಪಾಲ್**



## ಸಾಯುವವರಿಗೆ ರೂಮಿಲ್ಲ



ಮೂಡುಬಿದಿರೆಯಲ್ಲಿ ನಡೆಯುವ ಮಹತ್ವದ ಕಾರ್ಯಕ್ರಮವೊಂದಕ್ಕೆ ರಾಜ್ಯದ ಬೇರೆ ಬೇರೆ ಭಾಗಗಳಿಂದ ಸಾಹಿತ್ಯಾಭಿಮಾನಿಗಳು ಬರುತ್ತಾರೆ. ಅವರಿಗೆ ನೂರು ರೂಪಾಯಿಯಲ್ಲಿ ಮೂರು ದಿನ ವಸತಿ, ಊಟದ ವ್ಯವಸ್ಥೆ ಇರುತ್ತದೆ.

ಒಮ್ಮೆ ಕಾರ್ಯಕ್ರಮದ ದಿನದಂದೇ ಬಂದು ರೂಮು ಪಡೆಯಲು ಬಹಳ ಜನ ಕೌಂಟರ್ ಮುಂದೆ ಜಮಾಯಿಸಿದ್ದರು. ತುಂಬಾ ಹೊತ್ತು ಕಾಯ್ದ ಮರಿಸಾಹಿತಿಯೊಬ್ಬ, 'ನಾನು ಬಹಳ ದೂರದಿಂದ ಬಂದೇನ್ರಿ, ನಾನು ಸಾಯ್ತೇನ್ರಿ... ಬೇಗ ರೂಮು ಕೊಡ್ರಿ...' ಎಂದು ನಾಲ್ಕಾರು ಬಾರಿ ಹೇಳಿದ. ಅಲ್ಲಿನ ಸಹಾಯಕ, 'ಸ್ವಾಮಿ, ಸಾಯುವವರಿಗೆಲ್ಲ ನಾವು ರೂಮು ಕೊಡಲ್ಲ' ಎಂದು ಬಿಟ್ಟ. ಆಗ ಮರಿಸಾಹಿತಿ 'ಹಂಗಲ್ರಿ... ನಾನು ಸಾಹಿತಿ ಅದಿನ್ರಿ...' ಎಂದಾಗ ಅಲ್ಲಿದ್ದವರೆಲ್ಲ ನೂಕುನುಗ್ಗಲು ಮರೆತು ನಕ್ಕರು.

**ಸದಾನಂದ ಹೆಗಡೆ**

ಚಿತ್ರಗಳು: ಗಣೇಶ ಆಚಾರ್ಯ